**ಹೆಚ್ಚುವರಿ ಸಿವಿಲ್ ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.**

**ಉಪಸ್ಥಿತರು:- ಶ್ರೀ ರಾಹುಲ ಚಾಂಭಾರ ಬಿ.ಎ.ಎಲ್.ಎಲ್.ಬಿ**
**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ,**

**ಸಿ.ಸಿ. ನಂಃ 269/2020**

**ಫಿರ್ಯಾಧಿದಾರಃ ಕರ್ನಾಟಕ ಸರ್ಕಾರದ ಪರವಾಗಿ ಸೈದಾಪೂರ ಪೊಲೀಸ್ ಠಾಣೆ**

**// ವಿರುದ್ದ //**

**ಆರೋಪಿತರು ಃ ಸಿದ್ದಲಿಂಗ @ ಸಿದ್ದಲಿಂಗಪ್ಪ**

**ದೋಷಾರೋಪಣೆ**

| | |
|---|---|
| ಆರೋಪಿ. | ಸಿದ್ದಲಿಂಗ @ ಸಿದ್ದಲಿಂಗಪ್ಪ, ತಂದೆಃ ಆಶಪ್ಪ ಶೇಲಸಿಂಧಿ, ವಃ 26 ವರ್ಷ, ಉಃ ಒಕ್ಕಲುತನ, ಸಾಃ ತುರಕನದೊಡ್ಡಿ ತಾಃ ಗುರುಮಿಠಕಲ ಜಿಃ ಯಾದಗಿರಿ. |

**ಆದ ನಿಮ್ಮ ವಿರುದ್ಧ ದೋಷಿಸುವ ದೋಷಾರೋಪಣೆ ಏನೆಂದರೆ,**

ದಿನಾಂಕಃ 17-12-2019 ರಂದು 3-20 ಪಿ.ಎಂ ಸುಮಾರಿಗೆ ಸೈದಾಪುರ ಪೋಲಿಸ ಠಾಣೆಯ ಹದ್ದಿಯ ಪೈಕಿ ಬರುವ ತುರಕನದೊಡ್ಡಿ ಗ್ರಾಮದಲ್ಲಿ ಆರೋಪಿಯಾದ ನೀನು ಸಿದ್ದಲಿಂಗ ಅಂಗಡಿಯ ಹತ್ತಿರ ಸಾರ್ವಜನಿಕ ಸ್ಥಣದಲ್ಲಿ ಸರ್ಕಾರದಿಂದ ಯಾವುದೇ ಪರವಾನಿಗೆಯನ್ನು ಪಡೆಯದೇ ಅನಧಿಕೃತವಾಗಿ ಮದ್ಯದ ಕಿಂಗಫಿಶರ್ ಬಿಯರ ಬಾಟಲ್ ಗಳು ಮತ್ತು ಓಲ್ಡ ಟ್ರಾವೇನ ವಿಸ್ಕಿ ಟೆಟ್ರಾ ಪಾಕೇಟಗಳು, ಆಫೀಸರ ಚಾಯ್ಸ ಟೆಟ್ರಾ ಪಾಕೇಟಗಳು ಮತ್ತು ಇಂಪಿರಿಯರ್ ಬ್ಲೂ ಸಪಿಯರ್ ಬಾಟಲಗಳು ಮಾರಾಟ ಮಾಡುತ್ತಿದ್ದು, ಈ ಮೂಲಕ ನೀನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 43 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ಇಂದು ತೆರೆದ ನ್ಯಾಯಾಲಯದಲ್ಲಿ ದೋಷಾರೋಪಣೆಯನ್ನು ಆರೋಪಿಗೆ ಓದಿ ಹೇಳಲಾಯಿತು.)

ದಿನಾಂಕಃ 12-01-2023
ಸ್ಥಳ ಃ ಯಾದಗಿರಿ

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು ಯಾದಗಿರಿ